## ಸಿಂಡಿಕೇಟ್ ಸಭೆಯ ನಡವಳಿಗಳು

ದಿನಾಂಕ : 13.09.2024 ರಂದು ಶುಕ್ರವಾರ ಬೆಳಿಗ್ಗೆ 11.00 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಛೇರಿಯಲ್ಲಿ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಗಳು.

### ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

| | | |
|---|---|---|
| 1. | ಪ್ರೊ.ಹರೀಶ್ ರಾಮಸ್ವಾಮಿ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ.ಪಿ.ಭಾಸ್ಕರ್, | ಸಿಂಡಿಕೇಟ್ ಸದಸ್ಯರು |
| 3. | ಶ್ರೀ.ಶಿವಬಸಪ್ಪ ಮಾಲಿಪಾಟೀಲ್ | ಸಿಂಡಿಕೇಟ್ ಸದಸ್ಯರು |
| 4. | ಶ್ರೀ.ನಾಗೇಂದ್ರ ಪ್ರಸಾದ್ ಎ.ಎಂ | ಸಿಂಡಿಕೇಟ್ ಸದಸ್ಯರು |
| 5. | ಡಾ.ಮೀನಾಕ್ಷಿ ಖಂಡಿಮಠ, | ಸಿಂಡಿಕೇಟ್ ಸದಸ್ಯರು |
| 6. | ಶ್ರೀ.ಡಿ.ಆರ್.ಚಿನ್ನ, | ಸಿಂಡಿಕೇಟ್ ಸದಸ್ಯರು |
| 7. | ಶ್ರೀ.ಜೀಶಾನ್ ಆಖಿಲ್ ಸಿದ್ದಿಖಿ, | ಸಿಂಡಿಕೇಟ್ ಸದಸ್ಯರು |
| 8. | ಶ್ರೀ.ಶಿವಣ್ಣ ತಂದೆ ಬುಡ್ಡಪ್ಪ ತಪ್ಪಲದೊಡ್ಡಿ | ಸಿಂಡಿಕೇಟ್ ಸದಸ್ಯರು |
| 9. | ಶ್ರೀ.ಚನ್ನಬಸವ ತಂದೆ ಬಸವರಾಜಪ್ಪ | ಸಿಂಡಿಕೇಟ್ ಸದಸ್ಯರು |
| 10. | ಶ್ರೀ.ಕೆ.ಪ್ರತಿಮಾ ಕೋಂ.ರಘುರಾಜ ಕೋಲ್ಕರ್ | ಸಿಂಡಿಕೇಟ್ ಸದಸ್ಯರು |
| 11. | ಶ್ರೀ.ಪದ್ಮಾಕರ್ ಅಶೋಕ ಕುಮಾರ | ಸಿಂಡಿಕೇಟ್ ಸದಸ್ಯರು |
| 12. | ಶ್ರೀ.ಪಾಂಡು | ಸಿಂಡಿಕೇಟ್ ಸದಸ್ಯರು |
| 13. | ಡಾ.ಇಕ್ಬಾಲ್ ಶೇಖ್ | ಸಿಂಡಿಕೇಟ್ ಸದಸ್ಯರು |
| 14. | ಪ್ರೊ.ಪಾರ್ವತಿ ಸಿ.ಎಸ್. | ಸಿಂಡಿಕೇಟ್ ಸದಸ್ಯರು |
| 15. | ಪ್ರೊ.ಎಂ.ಯರಿಸ್ವಾಮಿ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 16. | ಡಾ.ಶಂಕರ ವ್ಹಿ. ಕೆ.ಎ.ಎಸ್(ಆಯ್ಕೆಶ್ರೇಣಿ),ಕುಲಸಚಿವರು, | ಸದಸ್ಯ ಕಾರ್ಯದರ್ಶಿಗಳು |

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಗೆ ಆಗಮಿಸಿದ ಸಿಂಡಿಕೇಟ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಕಲಂ/ ಐಟಂ ನಂ. | ವಿಷಯ | ಸಿಂಡಿಕೇಟ್ ಸಭೆಯ ನಿರ್ಣಯ |
|---|---|---|
| 01 | ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಪ್ರಕರಣ 28 (1) (ಜಿ) ರನ್ವಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಿಂದ ರಾಯಚೂರು ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೆ ನಾಮ ನಿರ್ದೇಶನಗೊಂಡಿರುವ ನೂತನ ಸಿಂಡಿಕೇಟ್ ಸದಸ್ಯರುಗಳಿಗೆ ವಿಶ್ವವಿದ್ಯಾಲಯದಿಂದ ಸ್ವಾಗತಿಸುವುದು. | ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 28 (1) (ಜಿ) ಅನ್ವಯ ವಿಶ್ವವಿದ್ಯಾಲಯವು ಗೌರವ ಸೂಚಕವಾಗಿ ಎಲ್ಲರ ಸಮಕ್ಷಮದಲ್ಲಿ ರಾಯಚೂರು ವಿಶ್ವವಿದ್ಯಾಲಯಕ್ಕೆ ನೂತನವಾಗಿ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡ ಪ್ರತಿಯೊಬ್ಬ ಸದಸ್ಯರನ್ನು ಗೌರವಿಸಿ, ಸಿಂಡಿಕೇಟ್ ಸಭೆಗೆ ಪರಿಚಯಿಸಲಾಯಿತು. ಮುಂದುವರೆದು, ಸರ್ಕಾರದ ಅಧಿಸೂಚನೆ ಅನ್ವಯ (ಸಂಖ್ಯೆ:ಸಿಆಸುಇ217ಆಸೇವ2024,ದಿನಾಂಕ:29.08.2024) ನೂತನವಾಗಿ ಕುಲಸಚಿವರೆಂದು ನೇಮಕಗೊಂಡಿರುವ ಡಾ.ಶಂಕರ ವ್ಹಿ. ಕೆ.ಎ.ಎಸ್ (ಆಯ್ಕೆ ಶ್ರೇಣಿ), ಅವರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತ ಕೋರಿ ಹಾಗೂ ಈ ಹಿಂದೆ ರಾಯಚೂರು ವಿಶ್ವವಿದ್ಯಾಲಯದ ಕುಲಸಚಿವರಾಗಿ ಕಾರ್ಯನಿರ್ವಹಿಸಿದ ಪ್ರೊ.ವಿಶ್ವನಾಥ ಎಂ. ಅವರನ್ನು ಕುಲಸಚಿವರು (ಆಡಳಿತ) ಕರ್ತವ್ಯದಿಂದ ಬಿಡುಗಡೆ ಮಾಡಿ, ಮಾತೃ ಇಲಾಖೆಯಾದ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸೇವೆಗೆ ಸೇರಲು ಅನುವು ಮಾಡಿ ಕೊಟ್ಟು, ಅವರನ್ನು ಬಿಡುಗಡೆಗೊಳಿಸಲಾಯಿತು. ಅವರು ವಿಶ್ವವಿದ್ಯಾಲಯದ ಪ್ರಥಮ ಕುಲಸಚಿವರಾಗಿದ್ದು, ಅವರು ಸಲ್ಲಿಸಿದ ಸೇವೆಗಳಿಗೆ ಸಿಂಡಿಕೇಟ್ ಸಭೆಯಲ್ಲಿ ಗೌರವಿಸುವ ಸಲುವಾಗಿ ವಿಶೇಷ ಆಹ್ವಾನಿತರನ್ನಾಗಿ ಮಾನ್ಯ ಕುಲಪತಿಗಳು ಕರೆದಿದ್ದು, ಅವರಿಗೆ ಸಿಂಡಿಕೇಟ್ ಸಭೆಯಲ್ಲಿ ಕೃತಜ್ಞತೆ ತಿಳಿಸಿ ಗೌರವಿಸಲಾಯಿತು. |
| 02 | ದಿನಾಂಕ: 12.07.2024 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು. | ದಿನಾಂಕ 12.07.2024 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಪ್ರೊ.ವಿಶ್ವನಾಥ ಎಂ. ಅವರು ರಾಯಚೂರು ವಿಶ್ವವಿದ್ಯಾಲಯದ ಕುಲಸಚಿವರಾಗಿದ್ದು ಹಾಗೂ ಆ ಸಭೆಯಲ್ಲಿ ಇದ್ದ ಕಾರ್ಯಸೂಚಿಗಳ ಬಗ್ಗೆ ಅವರಿಗೆ ಸಂಪೂರ್ಣ ಮಾಹಿತಿ ಇದ್ದ ಕಾರಣ, ಸಿಂಡಿಕೇಟ್ ಸಭೆಯ ಸದಸ್ಯರ ಒಪ್ಪಿಗೆ ಇದ್ದ ಕಾರಣ ದಿನಾಂಕ 12.07.2024ರ ಸಭೆಯ ನಡವಳಿಗಳನ್ನು ಮಂಡಿಸಲು ಪ್ರೊ.ವಿಶ್ವನಾಥ ಎಂ. ಅವರನ್ನು ಕೋರಲಾಯಿತು. ಪ್ರೊ.ವಿಶ್ವನಾಥ ಎಂ. ಅವರು ದಿನಾಂಕ 12.07.2024ರ ರ ಸಭೆಯ ಕಾರ್ಯಸೂಚಿಯ ವಿಷಯ ಮತ್ತು ಸಭೆಯ ನಿರ್ಣಯಗಳನ್ನು ಕೂಲಂಕುಷವಾಗಿ ಸಂಪೂರ್ಣ ವಿವರಗಳೊಂದಿಗೆ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಿದರು.<br><br>ದಿನಾಂಕ 12.07.2024ರ ಐಟಂ ಸಂಖ್ಯೆ 14 ರಲ್ಲಿ ತೀರ್ಮಾನಿಸಿದಂತೆ ಮುಂಬರುವ ಕುಲಪತಿಗಳು ರಾಯಚೂರು ವಿಶ್ವವಿದ್ಯಾಲಯದ ನಗರ ಕಛೇರಿಯ ಬಗ್ಗೆ ತೀರ್ಮಾನ ನಮೂದಿಸಲಾಗಿದ್ದು, ಸಭೆಯಲ್ಲಿ ಸಿಂಡಿಕೇಟ್ ಸದಸ್ಯರ ಚರ್ಚೆಯ ನಂತರ ಇದನ್ನು ಯಥಾವತ್ತಾಗಿ ಮುಂದುವರೆಸಬಹುದಾಗಿ, ತೀರ್ಮಾನಿಸಿ, ಹಿಂದಿನ ಎಲ್ಲಾ ನಡವಳಿಗಳನ್ನು ದೃಢೀಕರಿಸಲಾಯಿತು. ಮುಂದುವರೆದು, |

| | | |
|---|---|---|
| | | ಪ್ರೊ.ವಿಶ್ವನಾಥ ಎಂ. ಇವರು ಮಾನ್ಯ ಕುಲಪತಿಗಳಿಗೆ ಹಾಗೂ ಕುಲಸಚಿವರು ಹಾಗೂ ಕುಲಸಚಿವರು ಮೌಲ್ಯಮಾಪನ ಹಾಗೂ ಎಲ್ಲಾ ಸಿಂಡಿಕೇಟ್ ಸದಸ್ಯರಿಗೂ ವಂದನೆಗಳನ್ನು ತಿಳಿಸಿ, ಸಭೆಯಿಂದ ನಿರ್ಗಮಿಸಿದರು. |
| 03 | 2024-25 ನೇ ಶೈಕ್ಷಣಿಕ ಸಾಲಿನ ರಾಯಚೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಗಳ ಪ್ರವೇಶಾತಿಗಾಗಿ ಹೊರಡಿಸಿರುವ ಅಧಿಸೂಚನೆಯನ್ನು ಅನುಸಮರ್ಥಿಸುವ (Ratification) ಕುರಿತು. | ಮಾನ್ಯ ಕುಲಪತಿಗಳು, 2024-25ನೇ ಶೈಕ್ಷಣಿಕ ಸಾಲಿನ ರಾಯಚೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಗಳ ಪ್ರವೇಶಾತಿಗಾಗಿ ಹೊರಡಿಸಿರುವ ಅಧಿಸೂಚನೆಯನ್ನು ಅನುಸಮರ್ಥಿಸುವ (Ratification) ಕುರಿತು ಸಭೆಯ ಗಮನಕ್ಕೆ ತರಲಾಯಿತು. ಇದನ್ನು ಸಭೆಯು ಕುಲಂಕೂಷವಾಗಿ ಚರ್ಚಿಸಿ, ಈ ಹಿಂದೆ ನಡೆದು ಬಂದ ಪದ್ಧತಿಯನ್ನು ಅನುಸರಿಸಬೇಕೆಂದು ತೀರ್ಮಾನಿಸಿ, ವಿಶ್ವವಿದ್ಯಾಲಯ ಹೊರಡಿಸಿರುವ ಅಧಿಸೂಚನೆಯನ್ನು ಸರ್ವಾನುಮತದಿಂದ ಅಂಗೀಕರಿಸಿ, ಅನುಸಮರ್ಥಿಸಲಾಯಿತು. |
| 04 | 2024-25 ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಬೋಧನಾ ಕಾರ್ಯಭಾರ ಹಾಗೂ ಅಗತ್ಯತೆಗೆನುಸಾರವಾಗಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವ ಕುರಿತು. | 2024-25 ನೇ ಶೈಕ್ಷಣಿಕ ಸಾಲಿನಲ್ಲಿ 20 ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಬೋಧನಾ ಕಾರ್ಯಭಾರಗಳಿಗನುಗುಣವಾಗಿ (Work load) ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವ ಬಗ್ಗೆ ಮಾನ್ಯ ಕುಲಪತಿಗಳು ಸಭೆಯಲ್ಲಿ ಚರ್ಚಿಸಿದರು. ಮಾನ್ಯ ಕುಲಪತಿಗಳು 2023-24 ನೇ ಶೈಕ್ಷಣಿಕ ಸಾಲಿನಲ್ಲಿ ಬೋಧನಾ ಕಾರ್ಯಭಾರಗಳಿಗನುಗುಣವಾಗಿ ಸುಮಾರು 81 ಅತಿಥಿ ಉಪನ್ಯಾಸಕರನ್ನು ವಿಶ್ವವಿದ್ಯಾಲಯವು ನೇಮಿಸಿಕೊಂಡಿದ್ದು, (59 ಪೂರ್ಣಕಾಲಿಕ, ಹಾಗೂ 22 ಅರೆಕಾಲಿಕ) ಅತಿಥಿ ಉಪನ್ಯಾಸಕರ ಮೂಲಕ ವಿಭಾಗಗಳ ಶೈಕ್ಷಣಿಕ ಹಾಗೂ ಪಠ್ಯೇತರ ಚಟುವಟಿಕೆಗಳನ್ನು ನಡೆಸಲಾಗುತ್ತಿತ್ತು ಎಂದು ಸಭೆಗೆ ತಿಳಿಸಿದರು.<br><br>ಮುಂದುವರೆದು, 2024-25 ನೇ ಶೈಕ್ಷಣಿಕ ಸಾಲಿಗೆ ಯುಜಿಸಿ ಹಾಗೂ ವಿಶ್ವವಿದ್ಯಾಲಯದ ಪರಿನಿಯಮಾವಳಿ ಅನುಸಾರ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ಆಯ್ಕೆ ಮಾಡಿಕೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, ಕೆಲ ಸಿಂಡಿಕೇಟ್ ಸದಸ್ಯರು ಕಳೆದ ಸಾಲಿನಲ್ಲಿ ಸೇವೆ ಸಲ್ಲಿಸಿರುವ ಅತಿಥಿ ಉಪನ್ಯಾಸಕರನ್ನು ಈ ಸಾಲಿಗೂ ಮುಂದುವರೆಸಬೇಕೆಂದು ಸಭೆಗೆ ತಿಳಿಸಿದರು. ಮುಂದುವರೆದು, ಕುಲಸಚಿವರು, ವಿಶ್ವವಿದ್ಯಾಲಯವು ಎಲ್ಲಾ ನೇಮಕಾತಿಗಳನ್ನು ನಿಯಮನುಸಾರ ಮಾಡಲಾಗುವುದು ಎಂದು ತಿಳಿಸುತ್ತಾ, ಪ್ರತಿ ಸಾಲಿನಂತೆ ಈ ಶೈಕ್ಷಣಿಕ ಸಾಲಿನಲ್ಲೂ ಸಹಿತ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ಯುಜಿಸಿ ಹಾಗೂ ವಿಶ್ವವಿದ್ಯಾಲಯದ ಪರಿನಿಯಮಾವಳಿ ಅನುಸಾರ, ಸಂದರ್ಶನದ ಮೂಲಕ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, ಅತಿಥಿ ಉಪನ್ಯಾಸಕರನ್ನು ಯುಜಿಸಿ ಹಾಗೂ |

| | | |
|---|---|---|
| | | ವಿಶ್ವವಿದ್ಯಾಲಯದ ಪರಿನಿಯಮಾವಳಿ ಅನುಸಾರ ಆಯ್ಕೆ ಮಾಡಿಕೊಳ್ಳಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿ, ಅನುಮೋದಿಸಿತು. |
| 05 | 2025–26 ನೇ ಶೈಕ್ಷಣಿಕ ಸಾಲಿನಲ್ಲಿ ಸಂಯೋಜಿತ ಪದವಿ ಮಹಾವಿದ್ಯಾಲಯಗಳಿಗೆ ಸಂಯೋಜನೆ ನೀಡುವ ಕುರಿತು (Affiliation) ಚರ್ಚೆ. | 2024–25 ನೇ ಸಾಲಿನ ಸಂಯೋಜನೆಗೆ ಸಂಬಂಧಿಸಿದ ವರದಿಯನ್ನು ಸಭೆಯು ವಿಸ್ತೃತವಾಗಿ ಚರ್ಚಿಸಿ, ಕಾಲೇಜುಗಳ ತಾತ್ಕಾಲಿಕ ಸಂಯೋಜನಾ ಮುಂದುವರಿಕೆಗೆ ಕನಿಷ್ಠ 45% ಸಂಯೋಜನಾ ಅಂಕಗಳನ್ನು ಪಡೆಯಬೇಕೆಂಬ ಸರ್ಕಾರದ ನಿಯಮವನ್ನು ಸಭೆಯು ಗಮನಿಸಿತು. 2024–25ನೇ ಸಾಲಿನಲ್ಲಿ 42 ಕಾಲೇಜುಗಳು 45% ಕ್ಕಿಂತ ಕಡಿಮೆ ಅಂಕಗಳನ್ನು ಗಳಿಸಿರುವದನ್ನು ತೀವ್ರವಾಗಿ ಗಮನಿಸಿದ ಸಭೆಯು ಕಲ್ಯಾಣ ಕರ್ನಾಟಕದ ಶೈಕ್ಷಣಿಕ ಹಿತದೃಷ್ಟಿಯಿಂದ ಸರ್ವಾನುಮತದಿಂದ ಈ ಕೆಳಗಿನ ನಿರ್ಣಯಗಳನ್ನು ತೆಗೆದುಕೊಂಡಿತು..<br>ಅ) ಕಳೆದ ಶೈಕ್ಷಣಿಕ ಸಾಲಿನಂತೆ ಕನಿಷ್ಠ 35% ಸಂಯೋಜನಾ ಅಂಕ ಗಳಿಸಿದಂತಹ ಕಾಲೇಜುಗಳಿಗೆ 2024-25 ನೇ ಸಾಲಿನ ಸಂಯೋಜನಾ ಮುಂದುವರಿಕೆ ನೀಡುವುದು.<br>ಬ) 2021–22ನೇ ಸಾಲಿನಲ್ಲಿ ಮತ್ತು ಅದರ ನಂತರ ಪ್ರಾರಂಭವಾದ ಹೊಸ ಕಾಲೇಜುಗಳಿಗೆ ಸ್ನಾತಕ ಕೋರ್ಸ್‌ನ 3ನೇ ವರ್ಷದ ಫಲಿತಾಂಶ ಲಭ್ಯವಿರದ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಕೆ ನೀಡಲು ಸಭೆಯು ನಿರ್ಧರಿಸಿತು.<br>ಕ) ಕನಿಷ್ಠ 35% ಸಂಯೋಜನಾ ಅಂಕ ಗಳಿಸಿದಂತಹ ಕಾಲೇಜುಗಳಿಗೆ ನಿಯಮಾನುಸಾರ ಸ್ಥಳೀಯ ತನಿಖಾ ಸಮಿತಿಯಿಂದ ಮರು ತನಿಖೆ ಕೈಗೊಂಡು ಮುಂದಿನ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ಸಿಂಡಿಕೇಟ್ ಸಭೆಯು ನಿರ್ಣಯಿಸಿತು.<br>ಮಾನ್ಯ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಪತ್ರದ ಪ್ರಕಾರ ಕೋವಿಡ್ ನಂತರದಲ್ಲಿ ಕಾಲಮಿತಿ ಮೀರಿ ಮುಂದುವರೆದಿದ್ದ ಸಂಯೋಜನಾ ಪ್ರಕ್ರಿಯೆಯನ್ನು ಮೊದಲಿನಂತೆ ಕಾಲಮಿತಿ ಚೌಕಟ್ಟಿನಲ್ಲಿ ತರುವ ಹಿನ್ನಲೆಯಲ್ಲಿ 2025–26 ನೇ ಸಾಲಿನ ಸಂಯೋಜನೆ ಪ್ರಕ್ರಿಯೆಯನ್ನು ಡಿಸೆಂಬರ್ 2024ರ ಒಳಗೆ ಸಾಧ್ಯವಾದಷ್ಟು ತಕ್ಷಣಕ್ಕೆ ಮುಗಿಸಲು ಇರುವ ಸಾಧ್ಯತೆ ಬಗ್ಗೆ ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತಿಗೆ ಅವರು ತಿಳಿಸಿರುವ ಪತ್ರವನ್ನು ಸಿಂಡಿಕೇಟ್ ಸದಸ್ಯರ ಗಮನಕ್ಕೆ ತರಲಾಯಿತು. ಹಾಗೂ ಈ ಬಗ್ಗೆ ಸರ್ಕಾರದ ನಿರ್ದೇಶನ ಬಂದ ನಂತರ ಹಾಗೂ UUCMS Link ಲಭ್ಯವಾದ ನಂತರ 2025–26ನೇ ಸಾಲಿನ ಸಂಯೋಜನೆ ಕಾರ್ಯವನ್ನು ಕೂಡಲೇ ಕೈಗೆತ್ತಿಕೊಳ್ಳಬೇಕಾಗುವ ವಿಷಯದ ಕುರಿತು ಸಭೆಯ ಗಮನಕ್ಕೆ ತರಲಾಯಿತು. ಆದರೆ ಈ ಕುರಿತು ಈವರೆಗೆ ಸರ್ಕಾರದಿಂದ ಯಾವುದೇ ಆದೇಶ/ನಿರ್ದೇಶನ ಬಂದಿರದ ಹಿನ್ನಲೆಯಲ್ಲಿ ಪ್ರಧಾನ ಕಾರ್ಯದರ್ಶಿಯವರ ಪತ್ರ ಮಾತ್ರ ಸಿಂಡಿಕೇಟ್ ಸಭೆಯ ಗಮನಕ್ಕೆ ತಂದು ವಿಷಯದ ಮಾಹಿತಿಯನ್ನು ಸಭೆಗೆ ನೀಡಲಾಯಿತು. |

| | | |
|---|---|---|
| 06 | ರಾಯಚೂರು ವಿಶ್ವವಿದ್ಯಾಲಯದ ವಿವಿಧ ನಿಕಾಯಗಳ ಡೀನ್‌ರುಗಳ ಅವಧಿಯು 22.07.2024 ರಂದು ಮುಕ್ತಾಯವಾಗಿರುವುದರಿಂದ ಸರದಿಯ ಪ್ರಕಾರ ಮುಂದಿನ ಎರಡು ವರ್ಷಗಳ ಅವಧಿಯವರೆಗೆ **1. .ಪ್ರೊ. ಪಾರ್ವತಿ ಸಿ.ಎಸ್,** ಹಿರಿಯ ಪ್ರಾಧ್ಯಾಪಕರು, ಉಪಕರಣಾತ್ಮಕ ತಂತ್ರಜ್ಞಾನ ಅಧ್ಯಯನ ವಿಭಾಗ ಇವರಿಗೆ ಕಲಾ, ವಾಣಿಜ್ಯ ಹಾಗೂ ಶಿಕ್ಷಣ ನಿಕಾಯದ ಡೀನ್‌ರುಗಳನ್ನಾಗಿ ಹಾಗೂ **2.ಪ್ರೊ. ಪಿ.ಭಾಸ್ಕರ್,** ಹಿರಿಯ ಪ್ರಾಧ್ಯಾಪಕರು, ಉಪಕರಣಾತ್ಮಕ ತಂತ್ರಜ್ಞಾನ ಅಧ್ಯಯನ ವಿಭಾಗ ಇವರಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಡೀನ್‌ರುಗಳನ್ನಾಗಿ ನೇಮಕ ಮಾಡಿರುವ ಆದೇಶಕ್ಕೆ ಅನುಸಮರ್ಥನೆ **(Ratification)** ನೀಡುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದ ವಿವಿಧ ನಿಕಾಯಗಳ ಡೀನಗಳ ಅವಧಿಯು 22.07.2024 ರಂದು ಮುಕ್ತಾಯವಾಗಿರುವುದರಿಂದ ಸದರಿಯ ಪ್ರಕಾರ ಅವಧಿಯು ಅವಧಿಯು 22.07.2024 ರಂದು ಮುಕ್ತಾಯವಾಗಿರುವುದರಿಂದ ಸರದಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 21(1) ರಂತೆ ಸರದಿಯ ಪ್ರಕಾರ ಮುಂದಿನ ಎರಡು ವರ್ಷಗಳವರೆಗೆ ಉಪಕರಣಾತ್ಮಕ ತಂತ್ರಜ್ಞಾನ ಅಧ್ಯಯನ ವಿಭಾಗದ ಪ್ರಾಧ್ಯಪಕರಾದ ಪ್ರೊ.ಪಾರ್ವತಿ ಸಿ.ಎಸ್ ಇವರನ್ನು ಕಲಾ, ವಾಣಿಜ್ಯ ಮತ್ತು ಶಿಕ್ಷಣ ನಿಕಾಯದ ಡೀನರನ್ನಾಗಿ ಹಾಗೂ ಅದೇ ವಿಭಾಗದ ಹಿರಿಯ ಪ್ರಧ್ಯಾಪಕರಾದ ಪ್ರೊ.ಪಿ.ಭಾಸ್ಕರ್ ಇವರನ್ನು ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರನ್ನಾಗಿ ಈಗಾಗಲೇ ವಿಶ್ವವಿದ್ಯಾಲಯವು ನೇಮಿಸಿದ ನಿರ್ಧಾರವನ್ನು ಸಭೆಯು ಒಪ್ಪಿಗೆ ಸೂಚಿಸಿ, ಅನುಸಮರ್ಥಿಸಿತು. |
| 07 | ರಾಯಚೂರು.. ವಿಶ್ವವಿದ್ಯಾಲಯದ ಉಪಕರಣಾತ್ಮಕ ತಂತ್ರಜ್ಞಾನ ಅಧ್ಯಯನ ವಿಭಾಗದ ಪ್ರೊ. ಪಾರ್ವತಿ ಸಿ.ಎಸ್. ಹಿರಿಯ ಪ್ರಾಧ್ಯಾಪಕರು ಇವರ ವಿಭಾಗದ ಮುಖ್ಯಸ್ಥರ 2 ವರ್ಷದ ಅವಧಿಯು 23.09.2024 ರಂದು ಮುಗಿಯಲ್ಲಿದ್ದು, ಈಗ ಮುಂದಿನ 2 ವರ್ಷದ ಅವಧಿಗೆ ಪ್ರೊ. ಪಿ.ಭಾಸ್ಕರ್. ಹಿರಿಯ ಪ್ರಾಧ್ಯಾಪಕರು, ಇವರನ್ನು ಉಪಕರಣಾತ್ಮಕ ತಂತ್ರಜ್ಞಾನ ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡುವ ಕುರಿತು. | ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 34 ರ ಅಡಿಯಲ್ಲಿ ಹಾಗೂ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ರಾಯಚೂರು ವಿಶ್ವವಿದ್ಯಾಲಯದ ಉಪಕರಣಾತ್ಮಕ ತಂತ್ರಜ್ಞಾನ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಪ್ರೊ. ಪಾರ್ವತಿ ಸಿ.ಎಸ್. ಅವರ ವಿಭಾಗದ ಮುಖ್ಯಸ್ಥರ 2 ವರ್ಷದ ಅವಧಿಯು ದಿನಾಂಕ: 23.09.2024ರಂದು ಮುಗಿಯಲಿದ್ದು, ಮುಂದಿನ ಎರಡು ವರ್ಷದ ಅವಧಿಗೆ ಅದೇ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಪ್ರೊ.ಪಿ.ಭಾಸ್ಕರ್ ಅವರನ್ನು ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಒಪ್ಪಿಗೆ ಸೂಚಿಸಿ, ಅನುಮೋದಿಸಿತು. |
| 08 | ರಾಯಚೂರು ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವವನ್ನು ಅಕ್ಟೋಬರ್ 2024 ರ 3 ನೇ ವಾರದಲ್ಲಿ ಹಮ್ಮಿಕೊಳ್ಳವುದುರ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವದ ಬಗ್ಗೆ ಇಲ್ಲಿಯವರೆಗೆ ಆದ ಬೆಳವಣಿಗೆಯ ಬಗ್ಗೆ ಈಗಾಗಲೇ ಕುಲಸಚಿವರು ಮೌಲ್ಯಮಾಪನ ಇವರು ಸಭೆಗೆ ತಿಳಿಸುತ್ತಾ, ಮಾನ್ಯ ಕುಲಪತಿಗಳು, ಕುಲಾಧಿಪತಿಗಳು ಹಾಗೂ ಘನತೆವೆತ್ತ ರಾಜ್ಯಪಾಲರನ್ನು ಮತ್ತು ಮಾನ್ಯ ಶಿಕ್ಷಣ ಸಚಿವರನ್ನು ಭೇಟಿ ಮಾಡಿದ್ದು, ಇವರುಗಳಿಗೆ ಘಟಿಕೋತ್ಸವದ ದಿನಾಂಕ ನಿಗದಿಪಡಿಸಲು ವಿನಂತಿಸಿಕೊಂಡಿದ್ದಾರೆ ಎಂದು ಕುಲಸಚಿವರು ಮೌಲ್ಯಮಾಪನ ಇವರು ಸಭೆಗೆ ತಿಳಿಸಿದರು. ಮುಂದುವರೆದು, ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಘಟಿಕೋತ್ಸವಕ್ಕಾಗಿ ನಡೆಯುತ್ತಿರುವ ಎಲ್ಲಾ ತಯಾರಿಗಳನ್ನು ಮುಂದುವರೆಸಿಕೊಂಡು ಹೋಗಲು, ಕುಲಸಚಿವರು ಮೌಲ್ಯಮಾಪನ ಇವರಿಗೆ ಸಭೆಯು ಸೂಚಿಸಿತು. |
| 09 | ರಾಯಚೂರು ವಿಶ್ವವಿದ್ಯಾಲಯದ ದೈನಂದಿನ ಖರ್ಚು-ವೆಚ್ಚಗಳಿಗಾಗಿ ವಿಶ್ವವಿದ್ಯಾಲಯದ ಹಣಕಾಸು ವಿಭಾಗದ ಬ್ಯಾಂಕ್‌ಗಳ ಖಾತೆಯಿಂದ ಆಂತರಿಕವಾಗಿ ಹಣವನ್ನು ವರ್ಗಾಯಿಸುವ ಕುರಿತು | ರಾಯಚೂರು ವಿಶ್ವವಿದ್ಯಾಲಯದ ದೈನಂದಿನ ಖರ್ಚು ವೆಚ್ಚಗಳಿಗೆ ರಾಜ್ಯ ಸರ್ಕಾರದ ಹಣಕಾಸು ಇಲಾಖೆಯ ನಿರ್ದೇಶನದಂತೆ ವಿವಿಧ ಖಾತೆಗಳನ್ನು ತೆರೆಯಲಾಗಿರುತ್ತದೆ. (ವಿವಿಧ ಖಾತೆಗಳಿಂದ ವಿಶ್ವವಿದ್ಯಾಲಯದ ದೈನಂದಿನ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುತ್ತಿರುತ್ತದೆ.) ಈ ಎಲ್ಲಾ ಅಂಕಿ-ಅಂಶಗಳನ್ನು ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿರುತ್ತದೆ ಎಂದು ಕುಲಪತಿಗಳು ಸಭೆಗೆ ತಿಳಿಸಿದರು. ಈ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, ವಿಶ್ವವಿದ್ಯಾಲಯವು ತನ್ನ ದೈನಂದಿನ |

| | | |
|---|---|---|
| | | ಚಟುವಟಿಕೆಗಳಿಗೆ ಆಂತರಿಕ ಸಂಪನ್ಮೂಲಗಳಿಂದ ಕ್ರೋಢೀಕರಣಗೊಂಡು ವಿವಿಧ ಖಾತೆಗಳಿಗೆ ಜಮಾ ಆದ ಮೊತ್ತದಿಂದ ಜನರಲ್ ಫಂಡ್ ಖಾತೆಗೆ ವರ್ಗಾವಣೆ ಆಗಿರುವುದನ್ನು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿ, ಅನುಮೋದಿಸಿತು. |
| 10 | ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳ ಎಲ್ಲಾ ಸೆಮಿಸ್ಟರಗಳ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ (Gold Medal) ಗಳನ್ನು ಘಟಿಕೋತ್ಸವದಲ್ಲಿ ವಿತರಿಸುವುದರ ಕುರಿತು ಚರ್ಚೆ. | ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳ ಘಟಿಕೋತ್ಸವದಲ್ಲಿ ವಿತರಿಸುವ ಚಿನ್ನದ ಪದಕಕ್ಕಾಗಿ (Gold Medal) ಠೇವಣಿ ಇಡಲು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಯಿತು. ಆದರೆ ಕುಲಸಚಿವರು ಮೌಲ್ಯಮಾಪನ ಇವರು, ವಿವಿಧ ದಾನಿಗಳನ್ನು ಭೇಟಿ ಮಾಡಿದಾಗ 3 ಲಕ್ಷರೂಗಳ ಠೇವಣಿ ಹೆಚ್ಚು ಎಂದು ದಾನಿಗಳಲ್ಲಿ ಮೂಡಿದ ಅಭಿಪ್ರಾಯವನ್ನು ಮಾನ್ಯ ಕುಲಪತಿಗಳ ಗಮನಕ್ಕೆ ತಂದಿದ್ದು, ಮಾನ್ಯ ಕುಲಪತಿಗಳು ಈ ಅಂಶವನ್ನು ಗಣನೆಗೆ ತೆಗೆದುಕೊಂಡು, ಕುಲಸಚಿವರು ಮೌಲ್ಯಮಾಪನ ಇವರ ಅಧ್ಯಕ್ಷತೆಯಲ್ಲಿ ಇರುವ ಚಿನ್ನದ ಪದಕ ಸಮಿತಿ ಇವರುಗಳೊಂದಿಗೆ ಚರ್ಚಿಸಿ, 3 ಲಕ್ಷರೂಗಳ ಠೇವಣಿಯನ್ನು 1.5 ಲಕ್ಷರೂಗಳಿಗೆ ನಿಗದಿ ಮಾಡಲು ತೀರ್ಮಾನಿಸಲಾಗಿರುತ್ತದೆ. ಈ ತೀರ್ಮಾನದ ನಂತರ ಇಲ್ಲಿಯವರೆಗೆ 16 ಚಿನ್ನದ ಪದಕಗಳಿಗೆ ಪ್ರಾಯೋಜಕತ್ವ/ದಾನಿಗಳು ಠೇವಣಿ ನೀಡಿರುತ್ತಾರೆ ಎಂದು ಕುಲಸಚಿವರು ಮೌಲ್ಯಮಾಪನ ಅವರು ಸಭೆಗೆ ತಿಳಿಸಿದರು. ಮುಂದುವರೆದು, ನೂತ ಸಿಂಡಿಕೇಟ್ ಸದಸ್ಯರು ತಮ್ಮ ಸಂಪರ್ಕ ಹಾಗೂ ತಮಗೆ ತಿಳಿದ ಮೂಲಗಳಿಂದ ವಿಶ್ವವಿದ್ಯಾಲಯಕ್ಕೆ ಇನ್ನೂ ಹೆಚ್ಚಿನ ಚಿನ್ನದ ಪದಕಗಳನ್ನು ತರಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು. |
| 11 | **ಮಾನ್ಯ ಕುಲಪತಿಗಳ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳ ಚರ್ಚೆ.** | |
| 01 | ಶ್ರೀ.ಬಸವ ಎಂಟರ್ ಪ್ರೈಸಸ್ ರಾಯಚೂರು ಇವರು, ರಾಯಚೂರು ವಿಶ್ವವಿದ್ಯಾಲಯವು ಇತ್ತೀಚಿನ ವರ್ಷಗಳಲ್ಲಿ ಮಾಡಿದ ಅಭಿವೃದ್ಧಿ ಹಾಗೂ ಸಾಧನೆಗಳ ಕುರಿತು ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ಜಾಹೀರಾತು/ವಿಶೇಷ ಲೇಖನ ಪ್ರಕಟಿಸಲು ಕೋರಿ ಸಲ್ಲಿಸಿರುವ ಮನವಿ ಪತ್ರ ಕುರಿತು. | ರಾಯಚೂರು ವಿಶ್ವವಿದ್ಯಾಲಯದ ಶೈಕ್ಷಣಿಕ ಅಭಿವೃದ್ಧಿಗಳಿಗೆ ರಾಜ್ಯಮಟ್ಟದ ದಿನ ಪತ್ರಿಕೆಗಳಲ್ಲಿ ಜಾಹೀರಾತು ನೀಡುವ ಬಗ್ಗೆ ಮಾನ್ಯ ಕುಲಪತಿಗಳು ಸಭೆಯಲ್ಲಿ ಚರ್ಚಿಸಿದರು. ಈ ಬಗ್ಗೆ ಸಭೆಯು ಕುಲಂಕೂಷವಾಗಿ ಚರ್ಚಿಸಿ, ವಿಶ್ವವಿದ್ಯಾಲಯವು ಶ್ರೀ.ಬಸವ ಎಂಟರ್ ಪ್ರೈಸಸ್ ಅವರಿಗೆ ನೀಡಿರುವ ಜಾಹೀರಾತು ಕುರಿತು ಸಭೆಯ ಗಮನ ಸೆಳೆದಾಗ ಆ ಬಗ್ಗೆ ಸಿಂಡಿಕೇಟ್ ಸದಸ್ಯರು ತಮ್ಮ ವಿಚಾರಗಳನ್ನು ಪ್ರಸ್ತಾಪಿಸಿ, ವಿಶ್ವವಿದ್ಯಾಲಯದ ಸರ್ವತೋಮುಖ ಏಳಿಗೆ ಹಾಗೂ ಅವಶ್ಯಕತೆಗನುಗುಣವಾಗಿ, ಜಾಹೀರಾತು ನೀಡಬಹುದಾಗಿ ತಿಳಿಸುತ್ತಾ, ಈ ಜಾಹೀರಾತುಗಳು ವಿಶ್ವವಿದ್ಯಾಲಯದ ಮೇಲೆ ಆರ್ಥಿಕ ಹೊರೆ ಬೀಳದಂತೆ ಗಮನದಲ್ಲಿಟ್ಟುಕೊಂಡು ನೀಡಬಹುದಾಗಿರುತ್ತದೆ ಎಂದು ತೀರ್ಮಾನಿಸಿ, ಒಪ್ಪಿಗೆ ಸೂಚಿಸಲಾಯಿತು. |
| 02 | ರಾಯಚೂರು ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳ ಖಾಯಂ ಸಹ ಪ್ರಾಧ್ಯಾಪಕ ಹುದ್ದೆಗೆ ನೇಮಕಾತಿ ಮಂಡಳಿಯಲ್ಲಿ (BOA) ಆಯ್ಕೆಯಾದ ಅಭ್ಯರ್ಥಿಗಳ ಅನುಮೋದನೆ ಕುರಿತು. | ಸರ್ಕಾರದ ಆದೇಶದಂತೆ ವಿಶ್ವವಿದ್ಯಾಲಯವು ಎರಡು ಖಾಯಂ ಪ್ರಾಧ್ಯಾಪಕ ವೃಂದದ ಹುದ್ದೆಗಳಲ್ಲಿ ಒಂದು ಹುದ್ದೆ ಅರ್ಥಶಾಸ್ತ್ರ ವಿಭಾಗ, 371(J), SC (Other) ಮತ್ತು ಇನ್ನೊಂದು ಹುದ್ದೆ ವಾಣಿಜ್ಯ ವಿಭಾಗ, Non 371 (J), GM (Other) ಗಳಿಗೆ ಮತ್ತು ಐದು ಖಾಯಂ ಸಹ-ಪ್ರಾಧ್ಯಾಪಕ |

ವೃಂದದ ಹುದ್ದೆಗಳಲ್ಲಿ ಒಂದು ಹುದ್ದೆ ಇಂಗ್ಲೀಷ್ ವಿಭಾಗ, 371 (J), SC (Other), ಒಂದು ಹುದ್ದೆ ರಾಜ್ಯಶಾಸ್ತ್ರ ವಿಭಾಗ 371 (J), GM (Other), ಒಂದು ಹುದ್ದೆ ಪ್ರಾಣಿಶಾಸ್ತ್ರ ವಿಭಾಗ 371(J), ST (Other), ಒಂದು ಹುದ್ದೆ ರಸಾಯನಶಾಸ್ತ್ರ ವಿಭಾಗ 371 (J), GM (Women), ಹಾಗೂ ಒಂದು ಹುದ್ದೆ ಸೂಕ್ಷ್ಮಜೀವಶಾಸ್ತ್ರ ವಿಭಾಗ Non 371 (J), GM (Other)ಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಾಲಾಗಿದ್ದು, ಬಂದಂತಹ ಅರ್ಜಿಗಳಲ್ಲಿ 2 ಪ್ರಾಧ್ಯಾಪಕ ಹುದ್ದೆಗೂ ಹಾಗೂ ಇಂಗ್ಲೀಷ ವಿಭಾಗದ ಒಂದು ಸಹ_ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಸಲ್ಲಿಸಿದವರಲ್ಲಿ ನಿಯಮನುಸಾರ ಅರ್ಹತೆ ಇಲ್ಲದ ಕಾರಣ ಆ ವಿಭಾಗಕ್ಕೆ 371 (J) ಅಡಿಯಲ್ಲಿ SC ಹಾಗೂ ST ಮೀಸಲಾತಿ ಹುದ್ದೆಗಳನ್ನು ಬ್ಯಾಕ್‌ಲಾಗ್ ಎಂದು ಗುರುತಿಸಿ, ಮರು ನೇಮಕಾತಿ ಅಧಿಸೂಚನೆ ಹೊರಡಿಸಬೇಕಾಗಿದ್ದು, ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪತ್ರ ಬರೆಯಬೇಕಾಗುತ್ತದೆ ಎಂದು ತಿಳಿಸಿದರು. ಹಾಗೂ ಮಿಕ್ಕುಳಿದ 4 ವಿಭಾಗಗಳ ಅರ್ಹ ಅಭ್ಯರ್ಥಿಗಳನ್ನು ಯುಜಿಸಿ ಹಾಗೂ ವಿಶ್ವವಿದ್ಯಾಲಯದ ಪರಿನಿಯಮಾವಳಿ The statutes Relating to Appointment and promoting to Appointment and Promotion of teachers and other academic Staff and measures for the maintenance of standards in Higher Education in the Raichur University, as per the UGC Regulations 2018. ರ ಪ್ರಕಾರ ಸಂದರ್ಶನ ಪತ್ರ ಕಳುಹಿಸಿ, (ಮೈಕ್ರೋಬಯೋಲಾಜಿ ವಿಭಾಗಕ್ಕೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಡಾ.ಸಂತೋಷ ಕೆ.ಎಚ್. ಇವರನ್ನು (5+1 ಸಂಖ್ಯೆ) ಸಂದರ್ಶನಕ್ಕೆ ಹಾಜರಾಗಲು ಅವಕಾಶ ನೀಡಲಾಗಿತ್ತು.)

ದಿನಾಂಕ 12/09/2024 ರಂದು ಸಂದರ್ಶನಕ್ಕೆ ಆಹ್ವಾನಿಸಲಾಗಿತ್ತು. ಬೋಧಕರ ನೇಮಕಾತಿ ಮಂಡಳಿಯಲ್ಲಿ (BOA) ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಘನತೆವೆತ್ತ ರಾಜ್ಯಪಾಲರ ನಾಮನಿರ್ದೇಶನ ಸದಸ್ಯರು, ಬೇರೆ ವಿಶ್ವವಿದ್ಯಾಲಯದ 3 ಜನ ವಿಷಯ ತಜ್ಞರು (Professor), ಹಾಗೂ ವಿಶ್ವವಿದ್ಯಾಲಯದ ಡೀನರು ಹಾಗೂ ಮುಖ್ಯಸ್ಥರುಗಳನ್ನೊಳಗೊಂಡ ಸಮಿತಿಯು ಸಂದರ್ಶನವನ್ನು ನಡೆಸಿ, ಆಯ್ಕೆಯಾದ/ಕಾಯ್ದಿರಿಸಿದ ಅಭ್ಯರ್ಥಿಗಳ ಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಿಂಡಿಕೇಟ್ ಸಭೆಗೆ ನೀಡಿರುತ್ತಾರೆ. ಈ ಮುಚ್ಚಿದ ಲಕೋಟೆಯನ್ನು ಸಿಂಡಿಕೇಟ್ ಸಭೆಯಲ್ಲಿ ತೆರೆಯಲಾಯಿತು. ಈ ತೆರೆದ ಲಕೋಟೆಯಲ್ಲಿ ಇದ್ದಂತಹ ಆಯ್ದ ಅಭ್ಯರ್ಥಿ ಹಾಗೂ ಕಾಯ್ದಿರಿಸಿದ ಅಭ್ಯರ್ಥಿಯ ಪಟ್ಟಿ ಈ ಕೆಳಕಂಡಂತೆ ಇರುತ್ತದೆ.

<table>
<tr><td></td><td></td><td>
<table>
<tr><td>ಕ್ರ.ಸಂ</td><td>ಆಯ್ಕೆಯಾದ ಅಭ್ಯರ್ಥಿಗಳು</td><td>ವಿಭಾಗ</td><td>ಕಾಯ್ದಿರಿಸಿದ ಅಭ್ಯರ್ಥಿಗಳು</td></tr>
<tr><td>1</td><td>ಡಾ.ಸುಯಮೇಂದ್ರ ಕುಲಕರ್ಣಿ. ಸಹ ಪ್ರಾಧ್ಯಾಪಕರು.</td><td>ಸೂಕ್ಷ್ಮಜೀವಶಾಸ್ತ್ರ</td><td>ಡಾ.ಕೃಷ್ಣವೇಣಿ ಆರ್.</td></tr>
<tr><td>2</td><td>ಡಾ.ಲತಾ ಎಂ.ಎಸ್. ಸಹ ಪ್ರಾಧ್ಯಾಪಕರು.</td><td>ರಸಾಯನಶಾಸ್ತ್ರ</td><td>ಡಾ.ಪಿ.ಪುಷ್ಪವತಿ</td></tr>
<tr><td>3</td><td>ಡಾ.ಕುರಬರ ವೆಂಕಟೇಶ, ಸಹ ಪ್ರಾಧ್ಯಾಪಕರು.</td><td>ರಾಜ್ಯಶಾಸ್ತ್ರ</td><td>ಡಾ.ವಿಜಯಕುಮಾರ್ ಬಿ.</td></tr>
</table>
ಪ್ರಾಣಿಶಾಸ್ತ್ರ ವಿಭಾಗದ ಏಕ ಅಭ್ಯರ್ಥಿಯನ್ನು ಸಂದರ್ಶನಕ್ಕೆ ಕರೆಸಿದಾಗ ಆಯ್ಕೆ ಮಂಡಳಿಯು (BOA) ಡಾ.ರಾಘವೇಂದ್ರ ಇವರು ಪ್ರಾಣಿಶಾಸ್ತ್ರ ವಿಷಯದಲ್ಲಿ ನಿಯಮನುಸಾರ ಅರ್ಹತೆ ಹೊಂದಿರುವುದಿಲ್ಲ ಎಂದು ನಿರ್ಧರಿಸಿ, ಸಹ ಪ್ರಾಧ್ಯಾಪಕ ಹುದ್ದೆಯನ್ನು ಮರು ಅಧಿಸೂಚಿಸುವಂತೆ ನಿರ್ಧರಿಸಲಾಯಿತು. (ಇದನ್ನು ಮರು ಅಧಿಸೂಚನೆ ಹೊರಡಿಸಬೇಕು) ಆಯ್ಕೆಗೊಂಡ ಅಭ್ಯರ್ಥಿಗಳ ಪಟ್ಟಿಯ ಬಗ್ಗೆ ಸಭೆಯಲ್ಲಿ ಕುಲಂಕೂಷವಾಗಿ ಚರ್ಚಿಸಿ, ವಿಶ್ವವಿದ್ಯಾಲಯದ ಪರಿನಿಯಮಾವಳಿ ಅನುಸಾರ ರಚನೆಯಾದ ಆಯ್ಕೆ ಮಂಡಳಿ, ಆಯ್ಕೆ ಮಾಡಿರುವ ಅಭ್ಯರ್ಥಿಗಳನ್ನು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿ, ಆಯ್ಕೆ ಪಟ್ಟಿಯನ್ನು ಅನುಮೋದಿಸಿತು.
</td></tr>
<tr><td>03</td><td>ಮಾನ್ಯ ಕುಲಪತಿಗಳ ವೈದ್ಯಕೀಯ ವೆಚ್ಚವನ್ನು ಮರು ಪಾವತಿಸುವ ಕುರಿತು ಚರ್ಚೆ.</td><td>ಮಾನ್ಯ ಕುಲಪತಿಗಳ ತಾಯಿ, ಪತ್ನಿ ಹಾಗೂ ಸ್ವಂತ ವೈದ್ಯಕೀಯ ವೆಚ್ಚವನ್ನು ಸರ್ಕಾರದ ನಿಯಮನುಸಾರ ಜಿಲ್ಲಾ ಆರೋಗ್ಯ ಅಧಿಕಾರಿ ಅವರು ನೀಡಿರುವ ವರದಿ ಪ್ರಕಾರ ಅನುಮೋದಿಸಲಾಗಿದ್ದು, ಮಾನ್ಯ ಕುಲಪತಿಗಳು ವೈದ್ಯಕೀಯ ವೆಚ್ಚದ ರೂಗಳನ್ನು 2,83,928=00 ಪಾವತಿಸಲು ಒಪ್ಪಿಗೆ ಸೂಚಿಸಿ, ಅನುಮೋದಿಸಲಾಯಿತು.</td></tr>
</table>

13/09/2024

(ಡಾ.ಶಂಕರ ವ್ಹಿ .ಕೆ.ಎ.ಎಸ್.(ಆಯ್ಕೆ ಶ್ರೇಣಿ)
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.

13.9.2024.

(ಪ್ರೊ.ಹರೀಶ್ ರಾಮಸ್ವಾಮಿ)
ಕುಲಪತಿಗಳು ಹಾಗೂ ಅಧ್ಯಕ್ಷರು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.